ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 298 |
| ಸದಸ್ಯರ ಹೆಸರು | : | ಶ್ರೀ ಕೆ.ಹರೀಶ್ ಕುಮಾರ್<br>(ವಿಧಾನ ಸಭೆಯಿಂದ ಚುನಾಯಿತ ರಾದವರು) |
| ಉತ್ತರಿಸುವ ದಿನಾಂಕ | : | 14-09-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಪ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ದಕ್ಷಿಣ ಕನ್ನಡ ಜಿಲ್ಲಾ ಸೂರತ್ಕಲ್‌ನಲ್ಲಿರುವ ಟೋಲ್ ಗೇಟ್ ಅಧಿಕೃತವೇ; | ಹೌದು.<br><br>ದಕ್ಷಿಣ ಕನ್ನಡ ಜಿಲ್ಲಾ ಸೂರತ್ಕಲ್ ನಲ್ಲಿರುವ ಟೋಲ್ ಗೇಟ್ ಅಧಿಕೃತವಾದದ್ದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ-66 ರ ಕಿ.ಮೀ.358.042 ರಲ್ಲಿರುವ ಸೂರತ್ಕಲ್ ಟೋಲ್ ಪ್ಲಾಜಾ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರ ಕಾರ್ಯ ವ್ಯಾಪ್ತಿಗೆ ಒಳಪಟ್ಟಿದ್ದು, ಅಧಿಕೃತವಾಗಿ ಸ್ಥಾಪಿಸಲಾಗಿದೆ. ಸದರಿ ಟೋಲ್‌ನಲ್ಲಿ ಸುಂಕ ವಸೂಲಾತಿಯನ್ನು NH's User fee (Determination of rates and collection) Rules, 2008 Notification dated 05.12.2008 ರಂತೆ ಮಾಡಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಆ. | ಸದರಿ ಟೋಲ್‌ಗೇಟ್‌ನಲ್ಲಿ ಬೌನ್ಸರ್ (Bouncer) ಗಳು VIP ವಾಹನಗಳಿಗೂ ಅಡ್ಡಿಪಡಿಸಿ ದೌರ್ಜನ್ಯ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ಟೋಲ್‌ಗೇಟ್‌ನಲ್ಲಿ ಬೌನ್ಸರ್ (Bouncer) ಗಳು VIP ವಾಹನಗಳಿಗೂ ಅಡ್ಡಿಪಡಿಸಿ ದೌರ್ಜನ್ಯ ನಡೆಸುತ್ತಿರುವ ಕುರಿತು ಯಾವುದೇ ಪ್ರಸಂಗಗಳು ನಡೆದಿರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಇ. | ಪ್ರತಿ 60 ಕಿಲೋ ಮೀಟರ್‌ಗೊಂದು ಟೋಲ್‌ಗೇಟ್ ನಿಗಧಿಪಡಿಸುವ ಸರ್ಕಾರದ ತೀರ್ಮಾನ ಕಾರ್ಯರೂಪಕ್ಕೆ ಬಂದಿದೆಯೇ; | ಶುಲ್ಕ ವಸೂಲಾತಿ ಅಧಿಸೂಚನೆ 2008ರ ಷರತ್ತು 8(2) ರಲ್ಲಿ ಈ ಕೆಳಕಂಡಂತಿದೆ.<br>"Any toll plaza on the same section of National Highway and in the same direction shall not be established within a distance of 60 kms."<br><br>ಮೇಲೆ ತಿಳಿಸಿರುವ ಅಧಿಸೂಚನೆಯಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಶುಲ್ಕ ವಸೂಲಾತಿಯನ್ನು ಮಾಡಲಾಗುತ್ತದೆ ಎಂದು ವರದಿಸಿರುತ್ತಾರೆ. ಆದಾಗ್ಯೂ 60 ಕಿ.ಮೀ. ಗಿಂತ ಕಡಿಮೆ ಉದ್ದದ ಅಂತರದಲ್ಲಿ ಟೋಲ್ ಪ್ಲಾಜ್ ನಿರ್ಮಿಸಬೇಕಾದಲ್ಲಿ ಸಂಬಂಧಪಟ್ಟ ಅಧಿಕಾರಿಯು ನಿಖರ ದಾಖಲೆಗಳೊಂದಿಗೆ ಲಿಖಿತ ರೂಪದಲ್ಲಿ ಕಾರಣಗಳನ್ನು ನೀಡಿ ನಿರ್ಮಿಸಬಹುದಾಗಿದೆ. ಅಲ್ಲದೆ 60 ಕಿ.ಮೀ.ಗಿಂತ ಕಡಿಮೆ ಅಂತರದಲ್ಲಿ ಸ್ಥಾಪಿಸಲ್ಪಡುವ ಶುಲ್ಕ ವಸೂಲಾತಿ ಕೇಂದ್ರವು ಶಾಶ್ವತ ಸೇತುವೆ, ಬೈಪಾಸ್ ಅಥವಾ ಟನಲ್‌ಗಾಗಿ ವಸೂಲಾತಿ ಮಾಡಲು ಸ್ಥಾಪಿಸಬಹುದಾಗಿದೆ.<br><br>ರಾಷ್ಟ್ರೀಯ ಹೆದ್ದಾರಿ-66ರ ಕಿ.ಮೀ.358.042 ರಲ್ಲಿರುವ ಸೂರತ್ಕಲ್ ಟೋಲ್ ಪ್ಲಾಜಾವನ್ನು ಕಿ.ಮೀ.347.180 ರಲ್ಲಿರುವ ಹೆಜಮಾಡಿ ಟೋಲ್ ಪ್ಲಾಜಾದೊಂದಿಗೆ ವಿಲೀನಗೊಳಿಸುವ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಪ್ರಾದೇಶಿಕ ಅಧಿಕಾರಿಗಳು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬೆಂಗಳೂರು ಇವರಿಗೆ |

| | | |
|---|---|---|
| | | ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಪರಿಗಣಿಸಲು ಸಕ್ಷಮ ಪ್ರಾಧಿಕಾರದಿಂದ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಈ | ರಾಜ್ಯದ ಎಲ್ಲಾ ಟೋಲ್‌ಗೇಟ್‌ಗಳಲ್ಲಿ VIP Lane ಇದೆಯೇ; ಶೌಚಾಲಯ ಹಾಗೂ ಇತರೇ ಸೌಲಭ್ಯಗಳು ಇವೆಯೇ? (ವಿಸ್ತೃತವಾದ ವಿವರ ನೀಡುವುದು) | ಸೂರತ್ಕಲ್ ಟೋಲ್ ಪ್ಲಾಜಾ ಒಳಗೊಂಡಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಸ್ಥಾಪಿಸಲ್ಪಟ್ಟ ಎಲ್ಲಾ ವಸೂಲಾತಿ ಕೇಂದ್ರಗಳಲ್ಲಿ VIP ಗಳ ವಾಹನಗಳಿಗೆ ಹಾಗೂ Ambulance ಗೆ ಪ್ರತ್ಯೇಕವಾಗಿ ಪಥವನ್ನು ನಿರ್ಮಿಸಲಾಗಿದೆ. ಅದಲ್ಲದೆ ಮೂಲಭೂತ ಸೌಕರ್ಯಗಳಾದ ಶೌಚಾಲಯ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 304 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು